
ಸಂಯುಕ್ತ ಕರ್ನಾಟಕ
SAMYUKTA KARNATAKA
ಕನ್ನಡಿಗರ ಸಾಕ್ಷಿಪ್ರಜ್ಞೆ

# 'ದಿಟ್ಟ ಹೆಜ್ಜೆ' ಗ್ರಂಥ 23ರಂದು ಲೋಕಾರ್ಪಣೆ

## ಹೊರಟ್ಟಿಯವರ 44 ವರ್ಷಗಳ ಸಂಸದೀಯ ಪಯಣ ಯಶೋಗಾಥೆ

**ಗದಗ :** ಶಿಕ್ಷಕ ಸಮುದಾಯದ ನಂಬುಗೆಯ ನಾಯಕರಾಗಿ ಅವರ ಬಾಳಿಗೆ ದಾರಿ ತೋರಿದ ಹೊರಟ್ಟಿಯವರ ಸೇವೆಯನ್ನು ನಾಡಿನ ಶಿಕ್ಷಕ ಸಮುದಾಯ ಎಂದೂ ಮರೆಯಲಾರದು. ಅವರ 44 ವರ್ಷಗಳ ಸುದೀರ್ಘ ಸಂಸದೀಯ ಪಯಣದ ಯಶೋಗಾಥೆ ಕುರಿತು ನಾಳೆ ( ಏ.23) ಸಂಜೆ 6.30 ಕ್ಕೆ ಶ್ರೀ ತೋಂಟದಾರ್ಯ ಮಠದಲ್ಲಿ "ದಿಟ್ಟ ಹೆಜ್ಜೆ" ಹಾಗೂ "ಮೈಲುಗಲ್ಲುಗಳೇ ಮಾತನಾಡುತ್ತವೆ" ಎಂಬ ಅಮೂಲ್ಯ ಗ್ರಂಥಗಳು ಲೋಕಾರ್ಪಣೆಗೊಳ್ಳಲಿವೆ ಎಂದು ತೋಂಟದಾರ್ಯ ವಿದ್ಯಾಪೀಠದ ಆಡಳಿತಾಧಿಕಾರಿಗಳಾದ ಶಿವಾನಂದ ಪಟ್ಟಣಶೆಟ್ಟರ ಹಾಗೂ ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

ಅಧಿಕಾರದ ಮದವಾಗಲಿ, ಜನಪ್ರಿಯತೆಯ ಭ್ರಮೆಯಾಗಲಿ ಅವರನ್ನು ಕಾಡಿಲ್ಲ. ಜಾತಿ, ಕುಲ, ಗೋತ್ರದ ಕೆಸರನ್ನು ಎರಚುವವರ




ಮಧ್ಯದಲ್ಲಿಯೂ ತಾವು ನಂಬಿದ ಮೌಲ್ಯಗಳಿಗೆ ತಕ್ಕ ಹಾಗೆ ಬದುಕುವ ಬಹುದೊಡ್ಡ ಆಶಯವನ್ನು ತಮ್ಮ ನಡೆ ನುಡಿಗಳಲ್ಲಿ ಗಟ್ಟಿಯಾಗಿ ಉಳಿಸಿಕೊಂಡಿರುವ ಮತ ಮತ್ತು ಮತೀಯ ರಾಜಕಾರಣ ಮಾಡದ ನಾಡಿನ ಅಪರೂಪದ ರಾಜಕಾರಣಿಯಾಗಿದ್ದಾರೆ ಹೊರಟ್ಟಿಯವರು.


**ದಿಟ್ಟ ಹೆಜ್ಜೆ ಅಭಿನಂದನಾ ಗ್ರಂಥ:** ಬಸವರಾಜ ಹೊರಟ್ಟಿಯವರ ಕುರಿತು 2008ರಲ್ಲಿ ಪ್ರಕಟಗೊಂಡ "ದಿಟ್ಟ ಹೆಜ್ಜೆ" ಅಭಿನಂದನಾ ಗ್ರಂಥ ಮರು ಮುದ್ರಣ ಹಾಗೂ 44 ವರ್ಷಗಳ ಸಂಸದೀಯ ಪಯಣದ ಹೆಜ್ಜೆಯ ಗುರುತುಗಳನ್ನು ಹೊತ್ತ "ಮೈಲುಗಲ್ಲುಗಳೇ ಮಾತನಾಡುತ್ತವೆ" ಎಂಬ ಈ ಎರಡೂ ಕೃತಿಯನ್ನು ಕನ್ನಡದ ಕುಲಗುರುಗಳಾದ ಪೂಜ್ಯ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ತಮ್ಮ ಮಠದ ಆಶ್ರಯದಲ್ಲಿ ಸ್ಥಾಪಿಸಿದ ಡಾ.ಎಂ.ಎಂ.ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸುತ್ತಿರುವುದು ಔಚಿತ್ಯ ಪೂರ್ಣವಾಗಿದೆ.


ಈ ಅಮೂಲ್ಯ ಗ್ರಂಥಗಳ ಬಿಡುಗಡೆ ಸಮಾರಂಭವು ಡಾ.ತೋಂಟದ ಸಿದ್ಧರಾಮ ಶ್ರೀಗಳ ದಿವ್ಯ ಸಾನಿಧ್ಯದಲ್ಲಿ ಹಾಗೂ ಬಸವರಾಜ ಹೊರಟ್ಟಿಯರ ಘನ ಉಪಸ್ಥಿತಿಯಲ್ಲಿ ಮತ್ತು ವಿವಿಧ ಮಠಾಧೀಶರ ಸಮ್ಮುಖದಲ್ಲಿ, ಗಣ್ಯಮಾನ್ಯರ ಉಪಸ್ಥಿತಿಯಲ್ಲಿ ಲೋಕಾರ್ಪಣೆಗೊಳ್ಳಲಿವೆ. ಈ ಅರ್ಥಪೂರ್ಣ ಕಾರ್ಯಕ್ರಮಕ್ಕೆ ತಾವೂ ಬನ್ನಿ ಕರೆತನ್ನಿ ಎಂದು ಶಿವಾನಂದ ಪಟ್ಟಣಶೆಟ್ಟರ ಹಾಗೂ ಡಾ.ಬಸವರಾಜ ಧಾರವಾಡ ವಿನಂತಿಸಿದ್ದಾರೆ.

### 8 ಸಲ ಗೆದ್ದು ವಿಶ್ವದಾಖಲೆ....

**ಹೊರಟ್ಟಿಯವರು 1980 ರಿಂದ ಸೋಲಿಲ್ಲದೇ ನಿರಂತರ 8 ಸಲ ಗೆಲ್ಲುತ್ತಿರುವುದಕ್ಕೆ ಪಕ್ಷ ಕಾರಣವೆಂದು ಹೇಳುವುದು ಅಸತ್ಯವಾದೀತು. ಒಬ್ಬ ಸಾಮಾನ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಮಗನಾಗಿ, ಸ್ವತಃ ಶಿಕ್ಷಕರಾಗಿ, ಶಿಕ್ಷಕ ಸಮುದಾಯದ ಪ್ರತಿನಿಧಿಗಳಾಗಿ ವಿಧಾನಪರಿಷತ್ ಪ್ರವೇಶಿಸಿ, ಸಚಿವರಾಗಿ, ಮೂರು ಬಾರಿ ಸಭಾಪತಿಗಳಾಗಿ ಆಯ್ಕೆಗೊಂಡು ಒಂದೇ ಕ್ಷೇತ್ರದಿಂದ ಸತತ 8 ಸಲ ಗೆದ್ದು ವಿಶ್ವದಾಖಲೆ ನಿರ್ಮಿಸಿದ್ದಾರೆ. "ಇಂಗ್ಲೆಂಡ್‌ನ ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್"ನ ಹಾಗೂ "ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್"ನ ದಾಖಲೆಯ ಹಿರಿಮೆಗೆ ಪಾತ್ರರಾದವರು.**

# 23ರಂದು ಹೊರಟ್ಟಿಯವರ 44 ವರ್ಷಗಳ ಸಂಸದೀಯ ಪಯಣದ ಯಶೋಗಾಥೆಗಳ ಕುರಿತ ಗ್ರಂಥಗಳ ಲೋಕಾರ್ಪಣೆ




ಗದಗ : ಶಿಕ್ಷಕ ಸಮುದಾಯದ ನಂಬುಗೆಯ ನಾಯಕರಾಗಿ ಅವರ ಬಾಳಿಗೆ ದಾರಿ ತೋರಿದ ಹೊರಟ್ಟಿಯವರ ಸೇವೆಯನ್ನು ನಾಡಿನ ಶಿಕ್ಷಕ ಸಮುದಾಯ ಎಂದೂ ಮರೆಯಲಾರರು. ಅವರ 44 ವರ್ಷಗಳ ಸುಧೀರ್ಘ ಸಂಸದೀಯ ಪಯಣದ ಯಶೋಗಾಥೆ ಕುರಿತು ಇದೇ ದಿನಾಂಕ:23 ರಂದು ಸಾಯಂಕಾಲ 6.30ಘಂಟೆಗೆ ಶ್ರೀ ತೋಂಟದಾರ್ಯ ಮಠದಲ್ಲಿ "ದಿಟ್ಟ ಹೆಜ್ಜೆ" ಹಾಗೂ "ಮೈಲುಗಲ್ಲುಗಳೇ ಮಾತನಾಡುತ್ತವೆ" ಎಂಬ ಅಮೂಲ್ಯ ಗ್ರಂಥಗಳು ಲೋಕಾರ್ಪಣೆಗೊಳ್ಳಲಿವೆ ಎಂದು ತೋಂಟದಾರ್ಯ ವಿದ್ಯಾಪೀಠದ ಆಡಳಿತಾಧಿಕಾರಿಗಳಾದ ಶಿವಾನಂದ ಪಟ್ಟಣಶೆಟ್ಟರ ಹಾಗೂ ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.

ಇಂದು ಉದ್ಯಮವಾಗಿರುವ ರಾಜಕೀಯ ಕ್ಷೇತ್ರದಲ್ಲಿ ಶುದ್ಧ ಹಸ್ತರಾಗಿ ರಾಜಕಾರಣ ಮಾಡುವುದೆಂದರೆ ದಿನವೂ ಅಗ್ನಿ ದಿವ್ಯಗಳನ್ನು ಹಾಯುವ, ನೋವು ಸಂಕಟಗಳನ್ನು ಜೀರ್ಣಿಸಿ ಕೊಳ್ಳುವ ನೈತಿಕ ಶಕ್ತಿ ರಾಜಕಾರಣಿಗಳಿಗೆ ಇರಬೇಕಾಗುತ್ತದೆ. ಅಂಥಹ ನೈತಿಕ ಶಕ್ತಿಯ ಪ್ರತೀಕವೆಂಬಂತೆ ಬಸವರಾಜ ಹೊರಟ್ಟಿಯವರು ಕಾಣಿಸುತ್ತಿದ್ದಾರೆ.

ಹೊರಟ್ಟಿಯವರನ್ನು ಸಮೀಪದಿಂದ ಕಂಡವರಿಗೆ ಮಾತ್ರ ಅವರಲ್ಲೊಬ್ಬ ಅಪ್ಪಟ ಮನುಷ್ಯ ಕಾಣಿಸುತ್ತಾನೆ. ಅಧಿಕಾರದ ಮದವಾಗಲಿ, ಜನಪ್ರಿಯತೆಯ ಭ್ರಮೆಯಾಗಲಿ ಅವರನ್ನು ಕಾಡಿಲ್ಲ. ಜಾತಿ, ಕುಲ, ಗೋತ್ರದ ಕೆಸರನ್ನು ಎರಚುವವರ ಮಧ್ಯದಲ್ಲಿಯೂ ತಾವು ನಂಬಿದ ಮೌಲ್ಯಗಳಿಗೆ ತಕ್ಕ ಹಾಗೆ ಬದುಕುವ ಬಹುದೊಡ್ಡ ಆಶಯವನ್ನು ತಮ್ಮ ನಡೆ ನುಡಿಗಳಲ್ಲಿ ಗಟ್ಟಿಯಾಗಿ ಉಳಿಸಿಕೊಂಡಿರುವ ಮತ ಮತ್ತು ಮತೀಯ ರಾಜಕಾರಣ ಮಾಡದ ನಾಡಿನ ಅಪರೂಪದ ರಾಜಕಾರಣಿಯಾಗಿದ್ದಾರೆ ಹೊರಟ್ಟಿಯವರು.

ಕಳೆದ ಶತಮಾನದ 80ರ ದಶಕವು ಕರ್ನಾಟಕದ ಪಾಲಿಗೆ ಹಲವು ಕಾರಣಗಳಿಂದ ಮನ್ವಂತರದ ಕಾಲವೆಂದು ಕರೆಯಿಸಿಕೊಳ್ಳುತ್ತಿದೆ. ಈ ಕಾಲದಲ್ಲಿ ರಾಜಕೀಯ ರಂಗ ಪ್ರವೇಶಿಸಿದ ಹೊರಟ್ಟಿಯವರು 1980 ರಿಂದ ಸೋಲಿಲ್ಲದೇ ನಿರಂತರ 8 ಸಲ ಗೆಲ್ಲುತ್ತಿರುವುದಕ್ಕೆ ಪಕ್ಷ ಕಾರಣವೆಂದು ಹೇಳುವುದು ಅಸತ್ಯವಾದೀತು. ವೈಯಕ್ತಿಕ ವ್ಯಕ್ತಿತ್ವದ ಕಾರಣದಿಂದ ಸೋಲನ್ನು ಮಣಿಸಿ ಗದರಿಸಿ ನಿರಂತರ ಗೆಲುವಿನೊಂದಿಗೆ ಅವರು ದಿಟ್ಟ ಹೆಜ್ಜೆಗಳನ್ನು ಹಾಕುತ್ತಿದ್ದಾರೆಂಬುದು ಕನ್ನಡಿಗರ ಪ್ರಾಮಾಣಿಕ ಅಭಿಪ್ರಾಯವಾಗಿದೆ. ಒಬ್ಬ ಸಾಮಾನ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಮಗನಾಗಿ, ಸ್ವತಃ ಶಿಕ್ಷಕರಾಗಿ, ಶಿಕ್ಷಕ ಸಮುದಾಯದ ಪ್ರತಿನಿಧಿಗಳಾಗಿ ವಿಧಾನಪರಿಷತ್ತ ಪ್ರವೇಶಿಸಿ, ಸಚಿವರಾಗಿ, ಮೂರು ಬಾರಿ ಸಭಾಪತಿಗಳಾಗಿ ಆಯ್ಕೆಗೊಂಡು ಒಂದೇ ಕ್ಷೇತ್ರದಿಂದ ಸತತ 8 ಸಲ ಗೆದ್ದು ವಿಶ್ವದಾಖಲೆ ನಿರ್ಮಿಸಿ, "ಇಂಗ್ಲೆಂಡ್‌ನ ವರ್ಲ್ಡ್‌ಬುಕ್ ಆಫ್ ರೆಕಾರ್ಡ್ಸ್"ನ ಹಾಗೂ "ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್"ನ ದಾಖಲೆಯ ಹಿರಿಮೆಗೆ ಪಾತ್ರರಾದವರು. ಇಂತಹ ಮಾತೃಹೃದಯಿ ಗುಣ ಸ್ವಭಾವವುಳ್ಳ ವ್ಯಕ್ತಿಗಳು ರಾಜಕೀಯದಲ್ಲಿ ದೊರೆಯುವುದು ಅಪರೂಪ. ತಮ್ಮ ಜನಪರ ನಿಲುವುಗಳೊಂದಿಗೆ ಜನಮಾನಸದಲ್ಲಿ ರಾಜಕೀಯ ಕ್ಷೇತ್ರದ ದಂತ ಕಥೆಯಾಗಿರುವ ಬಸವರಾಜ ಹೊರಟ್ಟಿಯವರು ಮುಂದಿನ ಪೀಳಿಗೆಗೆ ಮಾದರಿ ರಾಜಕಾರಣಿಯಾಗಿದ್ದಾರೆ.

ಬಸವರಾಜ ಹೊರಟ್ಟಿಯವರ ಕುರಿತು 2008ರಲ್ಲಿ ಪ್ರಕಟಗೊಂಡ "ದಿಟ್ಟ ಹೆಜ್ಜೆ" ಅಭಿನಂದನಾ ಗ್ರಂಥ ಮರು ಮುದ್ರಣ ಹಾಗೂ 44 ವರ್ಷಗಳ ಸಂಸದೀಯ ಪಯಣದ ಹೆಜ್ಜೆಯ ಗುರುತುಗಳನ್ನು ಹೊತ್ತ "ಮೈಲುಗಲ್ಲುಗಳೇ ಮಾತನಾಡುತ್ತವೆ" ಎಂಬ ಈ ಎರಡೂ ಕೃತಿಯನ್ನು ಕನ್ನಡದ ಕುಲಗುರುಗಳಾದ ಪೂಜ್ಯ ಡಾ.ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ತಮ್ಮ ಮಠದ ಆಶ್ರಯದಲ್ಲಿ ಸ್ಥಾಪಿಸಿದ ಡಾ.ಎಂ.ಎಂ.ಕಲಬುರ್ಗಿ ಅಧ್ಯಯನ ಸಂಸ್ಥೆಯಿಂದ ಪ್ರಕಟಿಸುತ್ತಿರುವದು ಔಚಿತ್ಯ ಪೂರ್ಣವಾಗಿದೆ.

ಈ ಅಮೂಲ್ಯ ಗ್ರಂಥಗಳ ಬಿಡುಗಡೆ ಸಮಾರಂಭವು ಡಾ.ತೋಂಟದ ಸಿದ್ಧರಾಮ ಶ್ರೀಗಳ ದಿವ್ಯ ಸಾನಿಧ್ಯದಲ್ಲಿ ಹಾಗೂ ಸಭಾಪತಿ ಬಸವರಾಜ ಹೊರಟ್ಟಿಯರ ಘನ ಉಪಸ್ಥಿತಿಯಲ್ಲಿ ಮತ್ತು ವಿವಿಧ ಮಠಾಧೀಶರ ಸಮ್ಮುಖದಲ್ಲಿ, ಗಣ್ಯಮಾನ್ಯರ ಉಪಸ್ಥಿತಿಯಲ್ಲಿ ಲೋಕಾರ್ಪಣೆಗೊಳ್ಳಲಿವೆ. ಈ ಅರ್ಥಪೂರ್ಣ ಕಾರ್ಯಕ್ರಮಕ್ಕೆ ತಾವೂ ಬನ್ನಿ ಕರೆತನ್ನಿ ಎಂದು ಶಿವಾನಂದ ಪಟ್ಟಣಶೆಟ್ಟರ ಹಾಗೂ ಡಾ.ಬಸವರಾಜ ಧಾರವಾಡ ವಿನಂತಿಸಿದ್ದಾರೆ.